

بِسۡمِ اللّٰہِ الرَّحۡمٰنِ الرَّحِیۡم

# ಸಬ್‌ರ್ ಮತ್ತು ದುಆ ಎಂಬೆರೆಡು ಆಯುಧಗಳ ಮೂಲಕ ಮಾತ್ರವೇ ಜಮಾಅತ್ ಅಭಿವೃದ್ಧಿಗೊಳ್ಳುವುದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **23–12–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಹ್ಮದಿಯಾ ಜಮಾಅತನ್ನು ವಿರೋಧಿಸುವುದು ಮತ್ತು ಅಹ್ಮದಿಯಾ ಜಮಾಅತಿನ ವಿರೋಧಿಗಳು ಅಹ್ಮದಿಯರ ವಿರುದ್ಧ ದೌರ್ಜನ್ಯ ಮಾಡುವುದು ಒಂದು ಹೊಸ ವಿಷಯವೇನೂ ಅಲ್ಲ. ಪ್ರವಾದಿಗಳ ಜಮಾಅತ್‌ಗಳು ವಿರೋಧಿಸಲ್ಪಡುವುದು ಹೊಸ ಸಂಗತಿಯಲ್ಲ. ಎಲ್ಲಾ ಶೈತಾನರು ಒಟ್ಟಿಗೆ ಸೇರಿ ಈ ವಿರೋಧ ಕೃತ್ಯಗಳನ್ನು ಜರಗಿಸುತ್ತಾರೆ. ಮತಪಂಡಿತರು ಮತ್ತು ನೇತಾರರು ಸಾಮಾನ್ಯ ಜನರ ಮುಂದೆ ವಿಚಿತ್ರವಾದ ವಿಷಯಗಳನ್ನು ಪ್ರವಾದಿಗಳಿಗೆ ಮತ್ತು ಅವರ ಅನುಯಾಯಿಗಳಿಗೆ ಸಂಬಂಧಿಸಿ ಹೇಳಿ ಅವರನ್ನು ಉತ್ತೇಜಿಸುತ್ತಾರೆ. ವಿದ್ವೇಷದ ಅಗ್ನಿಯನ್ನು ಪ್ರಜ್ವಲಿಸಲು ಪ್ರಯತ್ನಿಸುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ, ಪ್ರತಿಯೊಬ್ಬ ಸಂದೇಶವಾಹಕನನ್ನು ವಿರೋಧಿಸಲಾಗುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ವಿರೋಧಿಸಲ್ಪಡದ ಯಾವ ಪ್ರವಾದಿಯೂ ಇಲ್ಲ. ಪ್ರಾವಾದಿಗಳನ್ನು ಅಪಹಾಸ್ಯ ಮಾಡಲಾಗುತ್ತದೆ. ಅವರ ಕೆಲಸಗಳಿಗೆ ತಡೆಯನ್ನು ಉಂಟುಮಾಡಲು ಶೈತಾನ್ ಪ್ರಯತ್ನಿಸುತ್ತಾ ಇರುತ್ತಾನೆ. ಆದುದರಿಂದ ಅಹ್ಮದಿಯಾ ಜಮಾಅತ್ ಎದುರಿಸುತ್ತಿರುವ ಈ ವಿರೋಧವು ಹೊಸದೇನೂ ಅಲ್ಲ. ಈ ವಿಷಯವನ್ನು ಪ್ರತಿಪಾದಿಸುತ್ತಾ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

وَكَذٰلِكَ جَعَلۡنَا لِكُلِّ نَبِيٍّ عَدُوًّا شَيٰطِيۡنَ الۡاِنۡسِ وَالۡجِنِّ يُوۡحِيۡ بَعۡضُهُمۡ اِلٰى بَعۡضٍ زُخۡرُفَ الۡقَوۡلِ غُرُوۡرًا

**ವಕಝಾಲಿಕ ಜಅಲ್‌ನಾ ಲಿಕುಲ್ಲಿ ನಬಿಯ್ಯಿನ್ ಅದುವ್ವನ್ ಶಯಾತೀನಲ್ ಇನ್‌ಸಿ ವಲ್‌ಜಿನ್ನಿ ಯೂಹೀ ಬಅಝುಹುಮ್ ಇಲಾ ಬಅ್‌ಝಿನ್ ಝುಖ್‌ರುಫಲ್ ಖೌಲಿ ಗುರೂರ.**

ಇದೇ ಪ್ರಕಾರ ನಾವು ಪ್ರತಿಯೊಬ್ಬ ಪ್ರವಾದಿಗೆ 'ಇನ್ಸ್' ಮತ್ತು 'ಜಿನ್ನ್'ಗಳಿಂದ ದುರ್ಜನರನ್ನು ಶತ್ರುಗಳನ್ನಾಗಿ ಮಾಡಿದ್ದೇವೆ. ವಂಚಿಸಲಿಕ್ಕಾಗಿ ಅವರು ಪರಸ್ಪರ ಮಧುರ ಮಾತುಗಳನ್ನಾಡುತ್ತಾರೆ. (6:113).

ಅಲ್ಲಾಹನ ಈ ಮಾತು ಇಂದಿನ ಕಾಲದಲ್ಲಿ ಸಹ ಸತ್ಯವಾಗಿದೆ. ಉದ್ದಟರಾದ ಈ ಮತಪಂಡಿತರು ಧರ್ಮದ ಹೆಸರಲ್ಲಿ ಜನರನ್ನು ಮೋಸ ಮಾಡುತ್ತಾರೆ. ಅವರು ಮೋಸ ಮಾಡುತ್ತಾ ಜನ ಸಾಮಾನ್ಯರನ್ನು ಉತ್ತೇಜಿಸುತ್ತಾರೆ. ಕೆಲವು ನೇತಾರರು ಸಹ ಅವರೊಂದಿಗೆ ಸೇರಿಕೊಂಡಿರುತ್ತಾರೆ. ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಜಮಾಅತ್ ಬಗ್ಗೆ ಎಂತಹ ಮಾತುಗಳನ್ನು ಹೇಳುತ್ತಾರೆಂದರೆ ಅವುಗಳ ಅಸ್ತಿತ್ವವೇ ಇರುವುದಿಲ್ಲ. ನಮಗೆ ಅವುಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಇದೇ ರೀತಿ ಜಮಾಅತ್ ವಿರುದ್ಧ ಈ ಜನರು ಮಾಡುವ ಕೆಲಸಗಳ ಬಗ್ಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಪರಿಹಾಸ ಮಾಡುವ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ವಿವರಿಸಿದ್ದಾನೆ. ಎಲ್ಲ ಪ್ರವಾದಿಗಳ ವಿರುದ್ಧ ಹೀಗೆಯೇ ಶತ್ರುಗಳು ವರ್ತಿಸುತ್ತಾರೆಂದು ಹೇಳಿದ್ದಾನೆ. ಅವರ ಬಗ್ಗೆ ಸುಳ್ಳು ಹೇಳುತ್ತಾರೆ. ಅವರನ್ನು ಪರಿಹಾಸ ಮಾಡುತ್ತಾರೆ. ಅವರನ್ನು ಲೇವಡಿ ಮಾಡಲಾಗುತ್ತದೆ. ಆದುದರಿಂದ ಈ ವಿರೋಧ ಮತ್ತು ನೀಡಲಾಗುವ ಕಷ್ಟ ಒಬ್ಬ ಸತ್ಯವಿಶ್ವಾಸಿಯಾದ ಅಹ್ಮದಿಯ ವಿಶ್ವಾಸವನ್ನು ವರ್ಧಿಸುವಂತೆ ಮಾಡುತ್ತದೆ. ಆದರೆ ಕೆಲವು ಜನರು ಹೀಗೆ ಸಹ ಹೇಳುತ್ತಾರೆ: ಅಹ್ಮದಿಯರಾದ ನಮ್ಮ ಮೇಲೆ ಮಾಡಲಾಗುವ ದೌರ್ಜನ್ಯ ಅದರ ಪರಾಕಾಷ್ಠೆಗೆ ತಲಪಿರುತ್ತದೆ. ನಾವು ಈಗ ಕಠಿಣ ವರ್ತನೆಗೆ ಕಠಿಣವಾಗಿಯೇ ಉತ್ತರ ನೀಡಬೇಕು. ನಾವು ಕಷ್ಟಗಳನ್ನು ಎಷ್ಟುಕಾಲ ಸಹಿಸಲು ಸಾಧ್ಯ ಎಂದು ಹೇಳುತ್ತಾರೆ.

ಇಂತಹ ಜನರು ಒಬ್ಬಿಬ್ಬರು ಮಾತ್ರವಾಗಿದ್ದರೂ ಕೆಲವರು ಇಂತಹ ಯುವಕರ ಬುದ್ಧಿಯನ್ನು ವಿಷಮಯವನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಅವರು ಹೇಳುತ್ತಾರೆ: ನಾವು ನಮ್ಮ ಬೇಡಿಕೆಗಳನ್ನು ಈಡೇರಿಸಲು ಮತ್ತು ನಮ್ಮ ಹಕ್ಕುಗಳನ್ನು ಪಡೆಯಲು ಲೌಕಿಕ ವಿಧಾನಗಳನ್ನು ಅನುಸರಿಸಬೇಕು ಎಂದು. ಇವುಗಳೆಲ್ಲಾ ಅಜ್ಞಾನದ ಮಾತುಗಳಾಗಿವೆ. ಇದು ಅತ್ಯಂತ ತಪ್ಪು ಯೋಚನೆಯಾಗಿದೆ. ಇಂತಹ ಜನರು ಭಾವೋದ್ವೇಗ ಭರಿತರಾಗಿ ನಮ್ಮ ಮೂಲಭೂತ ತತ್ವ ಏನೆಂಬುದನ್ನೇ ಮರೆತು ಬಿಟ್ಟಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಏನನ್ನು ಬಯಸುತ್ತಾರೆ. ಕಠಿಣ ಪರಿಸ್ಥಿತಿಯನ್ನೂ ಕಷ್ಟವನ್ನೂ ಸಹಿಸಲು ಯಾವ ಉಪದೇಶವನ್ನು ನೀಡಿದ್ದಾರೆ ಎಂದು ಅವರು ಯೋಚಿಸುವುದಿಲ್ಲ.

ಅಥವಾ ಇಂತಹ ಜನರು ನಮ್ಮ ಹಿತೈಷಿಗಳಾಗಿ ನಟಿಸಿ ಜಮಾಅತ್‌ನಲ್ಲಿ ಒಡಕನ್ನುಂಟು ಮಾಡಲು ಯತ್ನಿಸುತ್ತಿದ್ದಾರೆ. ಜಮಾಅತ್ ಅಭಿವೃದ್ಧಿ ಹೊಂದುತ್ತಾ ಇರುವಾಗ ಶತ್ರುಗಳು ವಿವಿಧ ಮಾರ್ಗಗಳಲ್ಲಿ ಆಕ್ರಮಣ ಮಾಡಲು ಪ್ರಾರಂಭಿಸುತ್ತಾರೆ. ವಿವಿಧ ರೀತಿಗಳಲ್ಲಿ ಪರೀಕ್ಷೆಗಳನ್ನು ನಡೆಸುತ್ತಾರೆ. ಇದು ಸಹ ಅವರ ಆಕ್ರಮಣದ ಒಂದು ವಿಧಾನವಾಗಿರಬಹುದಾಗಿದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಜಯದ, ಸಹಾಯದ ಮತ್ತು ಅಭಿವೃದ್ಧಿಯ ವಾಗ್ದಾನ ಮಾಡಿದ್ದಾನೆ.

ಆದರೆ ಕಠಿಣ ವರ್ತನೆಗೆ ಕಠಿಣವಾಗಿ ಉತ್ತರ ನೀಡಬಾರದೆಂದೂ ಪ್ರೀತಿ ವಾತ್ಸಲ್ಯ ಮತ್ತು ಪ್ರಾರ್ಥನೆ ಕಡೆಗೆ ಗಮನ ಹರಿಸಬೇಕೆಂದೂ ಹೇಳಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಪದೇ ಪದೇ ಮನವರಿಕೆ ಮಾಡಿಕೊಟ್ಟಿರುವುದೇನೆಂದರೆ ಅಹ್ಮದಿಯಾ ಜಮಾಅತಿನ ಅಭಿವೃದ್ಧಿ ಮತ್ತು ಶತ್ರುಗಳ ನಾಶ ಪ್ರಾರ್ಥನೆಗಳ ಮೂಲಕ ಆಗುವುದು ಎಂದು– ಇನ್‌ಶಾಅಲ್ಲಾಹ್. ಆದುದರಿಂದ ಅಹ್ಮದಿಯರು ತಮ್ಮನ್ನು ಅಲ್ಲಾಹನ ಉಪದೇಶಗಳನ್ನು ಅನುಸರಿಸುವವರನ್ನಾಗಿ ಮಾಡಿಕೊಂಡು ತಮ್ಮಲ್ಲಿ ತಖ್ವವನ್ನು ಸೃಷ್ಟಿಸುತ್ತಾ ಅಲ್ಲಾಹನ ಮುಂದೆ ಬಾಗುವವರಾಗಬೇಕು. ಮಸೀಹ್ ಮೌಊದ್ ಶಾಂತಿಯ ರಾಜಕುಮಾರನಾಗಿ ಆಗಮಿಸಬೇಕಾಗಿತ್ತು. ಅವರು ಹಾಗೆಯೇ ಆಗಮಿಸಿದರು. ಅವರು ತನ್ನನ್ನು ನಂಬುವವರೊಂದಿಗೆ ಪ್ರಥಮ ದಿನದಂದೇ ಹೇಳಿದ್ದರು: ನನ್ನ ಮಾರ್ಗಗಳು ಸುಲಭ ಮಾರ್ಗಗಳಲ್ಲ. ಅವುಗಳಲ್ಲಿ ಬಹಳ ಕಷ್ಟಗಳಿವೆ. ಈ ಜಮಾಅತಿನವರು ಭಾವೋದ್ವೇಗಗಳನ್ನು ಹತ್ಯೆ ಮಾಡಬೇಕಾದೀತು ಮತ್ತು ಜೀವ, ಸಂಪತ್ತುಗಳ ನಷ್ಟವನ್ನು ಸಹಿಸಬೇಕಾಗಬಹುದು ಎಂದು ಹೇಳಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಜನರು ಈ ಮಾರ್ಗದಲ್ಲಿ ಪ್ರತಿಯೊಂದು ರೀತಿಯ ಬಲಿದಾನಗಳನ್ನು ನೀಡುತ್ತಾ ಬಂದಿದ್ದಾರೆ. ನಾನು ಹಿಂದೆ ಖುತ್‌ಬಗಳಲ್ಲಿ ಹೇಳಿದ ಹಾಗೆ ಅಹ್ಮದಿಯರು ನನಗೆ ಬರೆಯುತ್ತಿದ್ದಾರೆ: ನಾವು ಶತ್ರುಗಳ ಆಕ್ರಮಣಗಳಿಂದ ಭಯಭೀತರಾಗಿಲ್ಲ. ನಮ್ಮ ವಿಶ್ವಾಸ ಮೊದಲಿಗಿಂತ ಬಲಿಷ್ಠವಾಗಿದೆ ಎಂದು.

ಆದರೆ ಒಬ್ಬಿಬ್ಬರು ಸಹ ಜಮಾಅತಿನ ತತ್ವಗಳಿಗೆ ವಿರುದ್ಧವಾಗಿ ಏನಾದರೂ ಹೇಳುವುದಾದರೆ ಅದು ಕಲಹ ದಾಯಕವಾಗುತ್ತದೆ. ಶತ್ರುಗಳಿಗೆ ನಮ್ಮ ವಿರುದ್ಧ ಇನ್ನಷ್ಟು ಹೆಚ್ಚು ವಿರೋಧ ಮಾಡಲು ಸಂದರ್ಭ ಸಿಗುತ್ತದೆ. ವಿಶಿಷ್ಟವಾಗಿ ವಾಟ್ಸ್‌ಅಪ್, ಟ್ವೀಟರ್, ಫೇಸ್‌ಬುಕ್ ಮತ್ತು ಬೇರೆ ಯಾವುದಾದರೂ ರೀತಿಯಲ್ಲಿ ಇಂತಹ ಪ್ರಚಾರ ನಡೆಸುವಾಗ ಹೀಗಾಗುತ್ತದೆ. ಏನಿದ್ದರೂ ಶತ್ರುಗಳ ದೌರ್ಜನ್ಯ ಮತ್ತು ಬರ್ಬರತೆಯನ್ನು ಎದುರಿಸಲು ನಾವು ದೌರ್ಜನ್ಯ ಮತ್ತು ಬರ್ಬರತೆಯಿಂದ ವರ್ತಿಸಬಾರದು ಎಂಬ ತತ್ವವನ್ನು ನಾವು ಪಾಲಿಸುತ್ತಾ ಇದ್ದೇವೆ. ನಾವು ಇದಕ್ಕೆ ವಿರುದ್ಧವಾಗಿ ವರ್ತಿಸಲಾರೆವು ಮತ್ತು ನಾವು ಶಸ್ತ್ರ ಬಳಸಿ ಸರಕಾರಗಳನ್ನು ಎದುರಿಸಲಾರೆವು. ನಾನು ಹೇಳಿದ ಹಾಗೆ ನಾವು ಪ್ರಾರ್ಥನೆ ಎಂಬ ಆಯುಧವನ್ನು ಬಳಸಿ ಎದುರಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ನೀಡಿದ ಉಪದೇಶವೇನೆಂದರೆ ನಾವು ಅಲ್ಲಾಹನ ಸಹಾಯ ಮತ್ತು ಅವನ ಪ್ರೀತಿಯನ್ನು ಗಳಿಸಬೇಕಾದರೆ ನಾವು ಶತ್ರುಗಳ ಆಕ್ರಮಣಗಳಿಗೆ ಮತ್ತು ಕಠಿಣ ವರ್ತನೆಗೆ ಕಠಿಣವಾದ ಉತ್ತರ ನೀಡಬಾರದು. ನಾವು ಸಹನೆ ಮತ್ತು ಪ್ರಾರ್ಥನೆಯನ್ನು ಅವಲಂಬಿಸಿದರೆ ನಾವು ಜಯವನ್ನು ಗಳಿಸುವೆವು. ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

‘‘ನನ್ನನ್ನು ಬೈಅತ್ ಮಾಡಿ ನನ್ನ ಜಮಾಅತ್‌ಗೆ ಪ್ರವೇಶಿಸಿದ ನನ್ನ ಸ್ನೇಹಿತರೇ, ಅಲ್ಲಾಹನ ಸಂಪ್ರೀತಿ ಗಳಿಸುವ ಭಾಗ್ಯವನ್ನು ಅವನು ನಮಗೆ ನೀಡುವಂತಾಗಲಿ. ಈಗ ನಿಮ್ಮ ಜನಸಂಖ್ಯೆ ಬಹಳ ಕಡಿಮೆಯಿದೆ ಮತ್ತು ನೀವು ಹೀನೈಸಲ್ಪಡುತ್ತಿರುವಿರಿ. ಈಗ ನೀವು ಒಂದು ಪರೀಕ್ಷೆಯ ಘಟ್ಟದಲ್ಲಿರುವಿರಿ. ಧರ್ಮವು ಪ್ರಾರಂಭವಾದ ಕಾಲದಿಂದ ಇದು ಅಲ್ಲಾಹನ ನಡೆವಳಿಕೆಯ ಪ್ರಕಾರವಾಗಿದೆ. ನೀವು ಮುಗ್ಗರಿಸಿ ಬೀಳುವಂತೆ ಮಾಡಲು, ನೀವು ಪ್ರತಿಯೊಂದು ರೀತಿಯಲ್ಲಿ ಸತಾಯಿಸಲ್ಪಡಲು, ಎಲ್ಲ ದಿಕ್ಕುಗಳಿಂದಲೂ ಪ್ರಯತ್ನಗಳು ನಡೆಯುವುದು. ನೀವು ವಿವಿಧ ರೀತಿಗಳ ಮಾತುಗಳನ್ನು ಆಲಿಸಬೇಕಾಗಬಹುದು. ನಿಮಗೆ ನಾಲಗೆ ಅಥವಾ ಕೈಯಿಂದ ಕಷ್ಟಕೊಡುವ ಪ್ರತಿಯೊಬ್ಬನು ತಾನು ಇಸ್ಲಾಮಿಗೆ ಸೇವೆ ಮಾಡುತ್ತಿರುವುದಾಗಿ ಯೋಚಿಸುವನು. ನಿಮ್ಮ ಮೇಲೆ ಕೆಲವು ದೈವಿಕ ಪರೀಕ್ಷೆಗಳೂ ಬಂದೆರಗುವುವು. ಆ ಮೂಲಕ ನೀವು ಪ್ರತಿಯೊಂದು ರೀತಿಯಲ್ಲಿ ಪರೀಕ್ಷಿಸಲ್ಪಡುವಿರಿ. ಆದುದರಿಂದ ನೀವು ಈಗಲೇ ಕೇಳಿಕೊಳ್ಳಿರಿ, ನೀವು ಒಣತರ್ಕದಿಂದಾಗಲಿ ಪರಿಹಾಸ್ಯಕ್ಕೆ ಪ್ರತಿಯಾಗಿ ಪರಿಹಾಸ ಮಾಡುವ ಮೂಲಕವಾಗಲಿ ಬೈಗಳಿಗೆ ಪ್ರತಿಯಾಗಿ ಬೈಗಳ ಮೂಲಕವಾಗಲಿ ಜಯಗಳಿಸಲಾರಿರಿ. ಏಕೆಂದರೆ ನೀವು ಈ ಮಾರ್ಗವನ್ನು ಅವಲಂಬಿಸಿದರೆ ನಿಮ್ಮ ಹೃದಯಗಳು ಕಠಿಣವಾಗುವುವು ಮತ್ತು ನಿಮ್ಮಲ್ಲಿ ಕೇವಲ ಮಾತುಗಳು ಮಾತ್ರ ಬಾಕಿಯಾಗುವುವು. ಇಂತಹ ಸ್ಥಿತಿಯನ್ನು ಅಲ್ಲಾಹನು ಇಷ್ಟಪಡುವುದಿಲ್ಲ ಮತ್ತು ಇದನ್ನು ತಾತ್ಸಾರ ಭಾವದಿಂದ ಕಾಣುತ್ತಾನೆ. ಆದುದರಿಂದ ನೀವು ನಿಮ್ಮ ಮೇಲೆ ಶಾಪಗಳನ್ನು ಜಮಾಯಿಸುವವರಾಗಬೇಡಿರಿ– ಜನರ ಶಾಪ ಮತ್ತು ಅಲ್ಲಾಹನ ಶಾಪವನ್ನು.’’

ಆದುದರಿಂದ ನಾವು ಈ ಉಪದೇಶ ಪ್ರಕಾರ ವರ್ತಿಸಬೇಕಾಗಿದೆ. ಈ ಮಾರ್ಗದರ್ಶನವನ್ನು ಅನುಸರಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ನೀಡಿದ ಉಪದೇಶ ಇದೇ ಆಗಿದೆ. ನಾವು ಬೈಗಳಿಗೆ ಉತ್ತರ ಬೈಗಳ ಮೂಲಕ ನೀಡಬಾರದು. ಗಲಬೆಗೊಂದಲಗಳಿಗೆ ಗಲಬೆ ಗೊಂದಲಗಳನ್ನು ಸೃಷ್ಟಿಸುವ ಮೂಲಕ ಉತ್ತರ ನೀಡಬಾರದು. ಕಾನೂನನ್ನು ಕೈಗೆತ್ತಿಕೊಂಡು ಉತ್ತರ ನೀಡಬಾರದು. ಪಾಕಿಸ್ಥಾನ ಮತ್ತು ಇತರ ಮುಸ್ಲಿಮ್ ದೇಶಗಳಲ್ಲಿ ಕಂಡುಬರುವುದೇನೆಂದರೆ, ನಾವು ಧರ್ಮಬದ್ಧ ರೀತಿಗಳಲ್ಲಿ ಪ್ರತಿರೋಧಿಸಿದರೆ ಸಹ ಬಹುತೇಕ ಸಂದರ್ಭಗಳಲ್ಲಿ ನಿಯಮಗಳು ನಮಗೆ ಸಹಾಯ ಮಾಡುವುದಕ್ಕೆ ಬದಲಾಗಿ ದೌರ್ಜನ್ಯಗಾರರಿಗೆ ಸಹಾಯಕರಾಗಿರುತ್ತಾರೆ. ಬಂಧಿತರಾದ ಅಹ್ಮದಿಯರಿಗೆ ಜಾಮೀನು ಸಹ ದೊರಕುವುದಿಲ್ಲ. ಏಕೆಂದರೆ ನ್ಯಾಯಾಲಯಗಳು ಮೌಲವಿಗಳ ಎದುರಿಗೆ ನಿಸ್ಸಹಾಯಕವಾಗಿವೆ. ನ್ಯಾಯಾಲಯದ ಹೊರಗೆ ನಿಂತು ಮೌಲವಿ ಸಂದೇಶ ಕಳುಹಿಸುತ್ತಾನೆ– ಜಾಮೀನು ನೀಡಿದರೆ ಅದರ ಪರಿಣಾಮ ನೀವು ನೋಡುವಿರಿ ಎಂದು. ಆದುದರಿಂದ ಬಹುತೇಕ ನ್ಯಾಯಾಧೀಶರು ತೀರ್ಪು ನೀಡದೆ ಮುಂದಿನ ವಿಚಾರಣೆಯ ದಿನವನ್ನು ನಿಗದಿ ಪಡಿಸುತ್ತಾರೆ. ನ್ಯಾಯ ಪಾಲನೆ ಮಾಡುವ ಸಂಸ್ಥೆಗಳು ನಮಗೆ ಸಹಾಯ

ಮಾಡಲು ಸಿದ್ಧರಾಗುವುದಿಲ್ಲ ಮತ್ತು ನಿಯಮಗಳು ನ್ಯಾಯಪಾಲನೆ ಮಾಡಲು ಸಿದ್ಧವಾಗುವುದಿಲ್ಲ. ಏನಿದ್ದರೂ ದೇಶದಲ್ಲಿ ಗಲಬೆ ಗೊಂದಲಗಳನ್ನು ಸೃಷ್ಟಿಸುವುದು ನಮ್ಮ ಉಪದೇಶಗಳಲ್ಲಿ ಸೇರಿಲ್ಲ. ನಮಗಿರುವುದು ಒಂದೇ ಮಾರ್ಗವಾಗಿದೆ. ಅಲ್ಲಾಹನ ಬಾಗಿಲಲ್ಲಿ ಬೇಡಿಕೊಳ್ಳಬೇಕು. ಮತ್ತು ಹೆಚ್ಚು ಹೆಚ್ಚಾಗಿ ಪ್ರಾರ್ಥನೆಗಳನ್ನು ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿರುವರು: "ಯಾರಾದರೂ ಬೈದರೆ ನಾವು ದೂರು ನೀಡಬೇಕಾದುದು ಅಲ್ಲಾಹನ ಸನ್ನಿಧಿಯಲ್ಲಿ ಹೊರತು ಯಾವುದೇ ನ್ಯಾಯಾಲಯದಲ್ಲಿ ಅಲ್ಲ. ಮಾನವರ ಬಗ್ಗೆ ಸಹಾನುಭೂತಿ ತೋರುವುದು ನಮ್ಮ ಕರ್ತವ್ಯವಾಗಿದೆ. ಬೈಗಳನ್ನು ಆಲಿಸಿ ಸಹ ನಾವು ಸಹಾನುಭೂತಿ ಪ್ರಕಟಿಸಬೇಕು."

ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು, ಅವನು ನೇರವಾಗಿ ಕಷ್ಟ ಅನುಭವಿಸುತ್ತಿದ್ದರೂ ಕಷ್ಟ ಅನುಭವಿಸದೆ ಇದ್ದರೂ, ಸಹನೆ ಮತ್ತು ಪ್ರಾರ್ಥನೆಯ ಮಾರ್ಗವನ್ನು ಅವಲಂಬಿಸಬೇಕಾಗಿದೆ. ಇದೇ ಸತ್ಯವಿಶ್ವಾಸದ ಚಿಹ್ನೆಯಾಗಿದೆ. ತನ್ನ ಜೊತೆಗೆ ನಡೆಯುವುದು ಸುಲಭದ ಕೆಲಸವೇನೂ ಅಲ್ಲ ಎಂದು ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುತ್ತಾರೆ.

ಮತ್ತೊಂದು ಕಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: "ಒಬ್ಬ ಸತ್ಯವಿಶ್ವಾಸಿಯ ತಖ್ವದ ಮಟ್ಟ ಬಹಳ ಉನ್ನತವಾಗಿರುತ್ತದೆ. ಅವರು ಶತ್ರುಗಳಿಂದ ಕಷ್ಟ ಅನುಭವಿಸುತ್ತಿದ್ದರೂ ಪ್ರತಿಯೊಂದು ರೀತಿಯ ಕೆಡುಕನ್ನು ಸಹಿಸುತ್ತಾ ಇರುತ್ತಾರೆ. ಶತ್ರುಗಳಿಂದ ಅನುಭವಿಸುವ ಕಷ್ಟವನ್ನು ನಿರ್ಲಕ್ಷಿಸುತ್ತಾರೆ. ಅನ್ಯರಿಂದ ಕಷ್ಟ ಅನುಭವಿಸುತ್ತಾ ಇದ್ದರೂ ಅವರ ತಪ್ಪುಗಳನ್ನು ಕ್ಷಮಿಸಲು ಸಿದ್ಧರಾಗಿರುತ್ತಾರೆ. ಅವರು ಗಲಭೆ ಗೊಂದಲಗಳನ್ನು ಹರಡುವುದಿಲ್ಲ. ಅವರು ಶಾಂತಿಯ ರಾಯಭಾರಿಗಳಾಗಿಯೇ ಇರುತ್ತಾರೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೆನಪಿನಲ್ಲಿಟ್ಟುಕೊಳ್ಳಿರಿ, ದೇವಭಯ ಹೊಂದಿದ ಸತ್ಯವಿಶ್ವಾಸಿಯ ಹೃದಯದಲ್ಲಿ ಕೆಡುಕಿನ ಯೋಚನೆಯೇ ಇರುವುದಿಲ್ಲ. ಸತ್ಯವಿಶ್ವಾಸಿಯು ತಖ್ವದಲ್ಲಿ ವೃದ್ಧಿಗೊಳ್ಳುವ ಪ್ರಕಾರ ಅನ್ಯರಿಗೆ ಶಿಕ್ಷೆ ಮತ್ತು ಕಷ್ಟಕೊಡುವುದನ್ನು ಇಷ್ಟ ಪಡುವುದಿಲ್ಲ. ತಖ್ವ ವರ್ಧಿಸುವ ಹಾಗೆ ಅನ್ಯರ ಬಗ್ಗೆ ಸಹಾನುಭೂತಿ ವರ್ಧಿಸುತ್ತಾ ಇರುತ್ತದೆ. ಶತ್ರುವಿಗೆ ಸಹ ಶಿಕ್ಷೆಯಾಗಬೇಕು ಮತ್ತು ಕಷ್ಟವಾಗಬೇಕು ಎಂದು ಅವನು ಬಯಸುವುದಿಲ್ಲ. ವಾಸ್ತವಿಕ ಮುಸ್ಲಿಮನು ಎಂದೂ ಅನ್ಯರಿಗೆ ಕೆಡುಕನ್ನು ಇಚ್ಛಿಸುವ ಅಸೂಯೆಗಾರನಾಗಲಾರನು. ಅನ್ಯ ಜನಾಂಗದ ಜನರು ಎಷ್ಟು ಅಸೂಯೆಭರಿತರಾಗಿರುತ್ತಾರೆಂದರೆ ಅವರ ಹೃದಯದಿಂದ ಅನ್ಯರ ಬಗ್ಗೆ ಇರುವ ಅಸೂಯೆ ಎಂದೂ ನಿವಾರಣೆಯಾಗಲಾರದು. ಅವರು ಯಾವಾಗಲೂ ಪ್ರತೀಕಾರ ಮನೋಭಾವದಿಂದ ವರ್ತಿಸಲು ಪ್ರಯತ್ನಿಸುತ್ತಾ ಇರುತ್ತಾರೆ. ನಮ್ಮ ಶತ್ರುಗಳು ನಮ್ಮ ವಿರುದ್ಧ ಏನೆಲ್ಲಾ ಮಾಡಿದರು. ಅವರಿಗೆ ಸಾಧ್ಯವಿರುವ ಎಲ್ಲ ಕಷ್ಟಗಳನ್ನು ನಮಗೆ ನೀಡಿದರು. ಹೀಗಿದ್ದರೂ ಅವರ ಸಾವಿರಾರು ಅಪರಾಧಗಳನ್ನು ಕ್ಷಮಿಸಲು ನಾವು ಈಗ ಸಹ ಸಿದ್ಧರಾಗಿದ್ದೇವೆ. ಆದುದರಿಂದ ನನ್ನೊಂದಿಗೆ ಸಂಬಂಧ ಸ್ಥಾಪಿಸಿರುವ ನೀವು ನೆನಪಿಡಿರಿ, ನೀವು ಪ್ರತಿಯೊಬ್ಬನೊಂದಿಗೆ ಅವನು ಯಾವ ಧರ್ಮವನ್ನು ಅವಲಂಬಿಸುವವನಾದರೂ ಯಾವ ಜನಾಂಗದವನಾದರೂ ಅವರೊಡನೆ ತಾರತಮ್ಯ ಭಾವನೆ ಹೊಂದದೆ ಎಲ್ಲರಿಗೂ ಒಳಿತನ್ನು ಮಾಡಿರಿ."

ನಮ್ಮ ಮಾತುಗಳಲ್ಲಿ ಅನ್ಯರ ಮಾತುಗಳ ಹಾಗೆ ಬುದ್ಧಿರಹಿತವಾಗಿ ಕೇವಲ ಭಾವದ್ವೇಗಗಳು ಮಾತ್ರ ಇದ್ದರೆ ಅವು ತಖ್ವ ಅಲ್ಲ. ನಮ್ಮ ಕೆಲಸಗಳು ಇಸ್ಲಾಮೀ ತತ್ವಗಳ ಪ್ರಕಾರವಾಗಿಲ್ಲವಾದರೆ ಅವು ತಖ್ವ ಅಲ್ಲ. ನಮ್ಮ ಮಾತು ಮತ್ತು ಕೆಲಸಗಳಲ್ಲಿ ಅಲ್ಲಾಹನ ಪ್ರಕಾಶ ಪ್ರಕಟವಾಗುವುದಿಲ್ಲವಾದರೆ ನಾವು ನಮ್ಮ ತಖ್ವದ ಬಗ್ಗೆ ಚಿಂತಿಸಬೇಕಾಗುತ್ತದೆ. ಅನಾನುಕೂಲ ಪರಿಸ್ಥಿತಿಗಳಲ್ಲಿ ನಾವು ಈ ಕಾಲಘಟ್ಟದ ಇಮಾಮರ ಉಪದೇಶಗಳನ್ನು ಮತ್ತು ಮಾರ್ಗದರ್ಶನಗಳನ್ನು ಅನುಸರಿಸಿ ವರ್ತಿಸುವುದಿಲ್ಲವಾದರೆ, ಅನುಸರಣೆಯ ಮೂಲಕ ಅಲ್ಲಾಹನಿಂದ ಲಭ್ಯವಾಗುವಂತಹ ಪ್ರಕಾಶದಿಂದ ನಾವು ದೂರ ಸರಿದು ಹೋಗುವೆವು. ನಾವು ಮೊತ್ತಮೊದಲು ನಮ್ಮನ್ನು ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ನಮ್ಮ ತಖ್ವದ ಮಟ್ಟ ಎಷ್ಟು ಉನ್ನತವಾಗಬೇಕೆಂದರೆ ನಮಗೆ ಅಲ್ಲಾಹನ ಪ್ರಕಾಶ ಕಾಣಿಸುವಂತಾಗಬೇಕು. ಸರಿಯಾಗಿ ಪ್ರಾರ್ಥಿಸುವವನು ಯಾವ ಮಟ್ಟವನ್ನು ತಲಪಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೋ ಆ ಮಟ್ಟವನ್ನು ನಾವು ತಲಪುವವರಾಗಬೇಕು. ಅಲ್ಲಾಹನ ಸಹಾಯ ಸಮೀಪವಾಗಿದೆ ಎಂಬ ದೃಢ ನಂಬಿಕೆ ನಮಗಿರಬೇಕು. ಆ ಅಲ್ಲಾಹನೇ ನಮಗೋಸ್ಕರ ದೇಶವನ್ನು ನಿರ್ಮಿಸುವನು. ಅವನೇ ನಮಗೋಸ್ಕರ ಭೂಮಿಯನ್ನು ಸಮತಟ್ಟು ಮಾಡುವನು– ಇನ್‌ಶಾಅಲ್ಲಾಹ್.

ಆದರೆ ನಾವು ಈ ಮಾರ್ಗದರ್ಶನಗಳಿಂದ ದೂರಸರಿದು ಏನನ್ನಾದರೂ ಗಳಿಸಲು ಬಯಸುವುದಾದರೆ ಏನೂ ಸಿಗಲಾರದು. ನಮ್ಮ ಮುಂದೆ ಆ ಸಂಘಟನೆಗಳ ಉದಾಹರಣೆಗಳಿವೆ. ಅವು ಇಸ್ಲಾಮಿನ ಹೆಸರಿನಲ್ಲಿ ಅಸಂಖ್ಯಾತ ಸಾಧನ ಸಾಮಗ್ರಿಗಳ ಜೊತೆಗೆ ಮಿಲಿಯ ಗಟ್ಟಲೆ ಡಾಲರ್‌ಗಳನ್ನು ಮತ್ತು ಪೌಂಡ್‌ಗಳನ್ನು ಖರ್ಚು ಮಾಡಿ ಇಸ್ಲಾಮೀ ಸರಕಾರ ಸ್ಥಾಪಿಸಲು ಬಯಸುತ್ತಿವೆ. ಆದರೆ ಅವರಿಗೆ ಗಲಬೆಗೊಂದಲಗಳು, ಹಿಂಸಾಚಾರ ಮತ್ತು ಬರ್ಬರತೆ ಹೊರತು ಬೇರೇನೂ ಗಳಿಸಲು ಸಾಧ್ಯವಾಗಲಿಲ್ಲ. ತಾತ್ಕಾಲಿಕ ಸ್ವಾಧೀನ ಪಡೆದ ಪ್ರದೇಶಗಳು ಸಹ ಕೈಬಿಟ್ಟು ಹೋದುವು. ಈ ಜನರು ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುವವರಾಗಿ ಗುರುತಿಸಲ್ಪಡುತ್ತಾರೆ. ಅವರು ಲೋಕದಲ್ಲಿ ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುತ್ತಿದ್ದಾರೆ. ಅವರು ಇಸ್ಲಾಮಿಗೆ ಸೇವೆ ಸಲ್ಲಿಸುವವರಾಗಿದ್ದಾರೆಂದು ಯಾರೂ ಹೇಳುವುದಿಲ್ಲ. ಇಸ್ಲಾಮಿಗೆ ಸೇವೆ ಸಲ್ಲಿಸುವುದು, ಇಸ್ಲಾಮಿಗೆ ಪ್ರಚಾರ ನೀಡುವುದು ಈಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಮತ್ತು ಅವರ ಜಮಾಅತಿನ ಮೂಲಕ ಎಂದು ವಿಧಿಸಲ್ಪಟ್ಟಿದೆ.

ಆದರೆ ಇದು ಸಾಧ್ಯವಾಗುವುದು ಅಲ್ಲಾಹನು ಕಳುಹಿಸಿದ ಈ ಸಂದೇಶವಾಹಕರ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯುವಾಗ ಮಾತ್ರವಾಗಿದೆ. ಹೀಗೆ ಮಾಡದೆ ಲೌಕಿಕವಾಗಿ ನಾವು ಎಷ್ಟು ಪ್ರಯತ್ನ ಮಾಡುವುದಾದರೂ– ನಮ್ಮ ಬಳಿ ಅದಕ್ಕೆ ಬೇಕಾದ ಶಕ್ತಿಯಾಗಲಿ ಸಾಧನ ಸಾಮಗ್ರಿಗಳಾಗಲಿ ಇಲ್ಲ– ನಾವು ಏನನ್ನೂ ಗಳಿಸಲಾರೆವು. ಆದರೆ ನಾವು ನಮ್ಮಲ್ಲಿ ತಖ್ವವನ್ನು ಸೃಷ್ಟಿಸುವುದಾದರೆ ನಮ್ಮ ಹೃದಯದಲ್ಲಿ ಅಲ್ಲಾಹನ ಭಯವನ್ನು ಸೃಷ್ಟಿಸುವುದಾದರೆ, ನಾವು ನಮ್ಮ ಪ್ರಾರ್ಥನೆಗಳನ್ನು ಅತ್ಯಂತ ಉನ್ನತ ಮಟ್ಟಕ್ಕೆ ತಲಪಿಸುವುದಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನನ್ನು ಉಲ್ಲೇಖಿಸಿ ಹೇಳಿದ ಹಾಗೆ ನಮಗೆ ಅಲ್ಲಾಹನಿಂದ ಎಂತಹ ಪ್ರಕಾಶ ಮತ್ತು ಶಕ್ತಿ ದಯಪಾಲಿಸಲ್ಪಡುವುದೆಂದರೆ ಅತ್ಯಂತ ದೊಡ್ಡ ಶಕ್ತಿಗಳು ಸಹ ಅದನ್ನು ಎದುರಿಸುವ ಸಾಮರ್ಥ್ಯ ಹೊಂದಲಾರವು.

ಅಲ್ಲಾಹನು ಹೀಗೆ ಹೇಳಿದ್ದಾನೆ: إِنَّ أَكْرَمَكُمْ عِندَ اللَّهِ أَتْقَاكُمْ **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್.** ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ (ಮುತ್ತಖಿ ಆಗಿರುವವನು) ಖಂಡಿತವಾಗಿಯೂ ಅವನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. (49:14) ಏನು, ಅಲ್ಲಾಹನು ತಪ್ಪಾಗಿ ಹೇಳುತ್ತಾನೆಯೇ? ಅಲ್ಲಾಹನು ಮುತ್ತಖಿಯು ಗೌರವಾರ್ಹನೆಂದು ಒಂದು ಕಡೆ ಹೇಳುವಾಗ ಇನ್ನೊಂದು ಕಡೆ ಲೌಕಿಕ ಜನರ ಮುಂದೆ ಅವರನ್ನು ಹೀನಾಯಗೊಳಿಸಿ ಬಿಡುವನೇ? ಖಂಡಿತವಾಗಿಯೂ ಅಲ್ಲಾಹನು ಹಾಗೆ ಮಾಡಲಾರನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ಹೇಳಿದ ಹಾಗೆ ಪ್ರವಾದಿಗಳು ಮತ್ತು ಅವರ ಜಮಾಅತಿನ ಜನರು ಲೌಕಿಕ ವಾದಿಗಳಾದ ಜನರ ವಿರೋಧವನ್ನು ಎದುರಿಸಬೇಕಾಗಿರುತ್ತದೆ. ಆದರೆ ಪ್ರತಿಯೊಂದು ಸಂದರ್ಭದಲ್ಲಿ ಶತ್ರು ಸ್ವತಃ ಹೀನಾಯಗೊಳಿಸಲ್ಪಡಲಿಲ್ಲವೇ? ಜಮಾಅತಿನ ಅಭಿವೃದ್ಧಿಯನ್ನು ತಡೆಯಲು ಎದ್ದು ನಿಂತ ಪ್ರತಿಯೊಬ್ಬನು ಸೋತು ಹೋಗಲಿಲ್ಲವೇ? ಜಮಾಅತಿನ ಅಭಿವೃದ್ಧಿಯನ್ನು ತಡೆಯಲು ಮಾಡಿದ ಪ್ರತಿಯೊಂದು ತಡೆಗಟ್ಟು ನಿಷ್ಫಲಗೊಂಡು ಜಮಾಅತ್ ಅಭಿವೃದ್ಧಿಗೊಂಡು ಹಬ್ಬಲಿಲ್ಲವೇ? ವಿರೋಧಿಗಳು ಆಂತರಿಕ ಉಪಾಯಗಳನ್ನು ಪರೀಕ್ಷಿಸಿದರು; ಬಾಹ್ಯ ಆಕ್ರಮಣಗಳನ್ನು ಮಾಡಿದರು. ಆದರೆ ಜಮಾಅತ್ ಅಭಿವೃದ್ಧಿಯ ರಾಜಮಾರ್ಗದಲ್ಲಿ ಹೆಜ್ಜೆ ಹಾಕುತ್ತಾ ಈಗ ಇನ್ನೂರ ಒಂಬತ್ತು ದೇಶಗಳಲ್ಲಿ ಸ್ಥಾಪಿತವಾಗಿದೆ. ಒಂದು ಸ್ಥಳದಲ್ಲಿ ಜಮಾಅತನ್ನು ದಬಾಯಿಸಲು ಪ್ರಯತ್ನ ನಡೆಯುವಾಗ ಬೇರೆ ಹತ್ತು ಸ್ಥಳಗಳಲ್ಲಿ ಮೊದಲಿಗಿಂತ ಹೆಚ್ಚಾಗಿ ಹಬ್ಬುವ ಸಂದರ್ಭ ಮತ್ತು ಸಾಮಗ್ರಿಗಳನ್ನು ಅಲ್ಲಾಹನು ಒದಗಿಸುತ್ತಾನೆ.

ತಖ್ವದಲ್ಲಿ ವೃದ್ಧಿಯನ್ನು ಗಳಿಸಿದ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಸಹ ಗೌರವಿಸದೆ ಬಿಡಲಾರೆ ಎಂದು ಅಲ್ಲಾಹನು ಹೇಳಿರುವಾಗ, ಅಲ್ಲಾಹನೇ ಸ್ವತಃ ಕಳುಹಿಸಿದ ಮಹಾನುಭಾವರ ಜಮಾಅತಿಗೆ ಅಲ್ಲಾಹನು ಮಾಡಿದ ವಾಗ್ದಾನಗಳನ್ನು ಈಡೇರಿಸದೆ ಬಿಟ್ಟುಬಿಡುವನೇ? ಅವರನ್ನು ಗೌರವಿಸದೆ ಬಿಟ್ಟುಬಿಡುವನೇ? ಹೀಗೆ ಎಂದೂ ಆಗಲಾರದು. ಅವರಿಗೆ ಕಳೆದ ನೂರಇಪ್ಪತ್ತೈದು ವರ್ಷಗಳಲ್ಲಿ ಅಲ್ಲಾಹನ ಸಹಾಯ ದೊರಕುವುದು ಕಾಣುತ್ತಿದ್ದೇವೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದೇನೆಂದರೆ, ಇವುಗಳೆಲ್ಲಾ ಸ್ಥಿರ ಚಿತ್ತತೆ ಮತ್ತು ಸ್ಥಿರ ಹೆಜ್ಜೆ ಹಾಕುವ ಶರ್ತಕ್ಕೆ ಒಳಗಾಗಿದೆ. ನಾವು ಸ್ಥಿರ ಚಿತ್ತತೆಯಿಂದ ಅಲ್ಲಾಹನನ್ನು ಬೇಡಿಕೊಳ್ಳುತ್ತಾ ಇದ್ದರೆ ಶತ್ರುಗಳು ಧೂಳೀಭವಿಸುವುದನ್ನು ಇನ್‌ಶಾಅಲ್ಲಾಹ್ ನಾವು ಕಾಣುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಿಮ್ಮ ಜೀವಿತ, ನಿಮ್ಮ ಮರಣ, ನಿಮ್ಮ ಪ್ರತಿಯೊಂದು ಚಲನೆ, ನಿಮ್ಮ ಮೃದುತ್ವ ಮತ್ತು ನಿಮ್ಮ ಕಾಠಿಣ್ಯ ಎಂದರೆ ನಿಮ್ಮ ಸೌಮ್ಯತೆ ಮತ್ತು ಕೋಪ ಎಲ್ಲವೂ ಸಹ ಅಲ್ಲಾಹನಿಗೋಸ್ಕರವಾಗಿರಲಿ. ನೀವು ನಿಮ್ಮ ಸ್ವಾರ್ಥಲಾಭಕ್ಕೋಸ್ಕರ ಯಾರ ವಿರುದ್ಧವೂ ಕೋಪಗೊಳ್ಳಬಾರದು. ನೀವು ಯಾವುದೇ ಲೌಕಿಕ ವಸ್ತುವನ್ನು ನೋಡಿ ಸಂತೋಷಪಡಬೇಡಿರಿ. ಇವೆಲ್ಲಾ ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರವಾಗಿರಲಿ."

"ನೀವು ಪ್ರತಿಯೊಂದು ಕಷ್ಟ ಮತ್ತು ವಿಪತ್ತಿನ ಕಾಲದಲ್ಲಿ ಅಲ್ಲಾಹನನ್ನು ಪರೀಕ್ಷಿಸಬಾರದು. ಯಾವತ್ತೂ ನೀವು ಅಲ್ಲಾಹನೊಂದಿಗೆ ಸಂಬಂಧವನ್ನು ಮುರಿದು ಹಾಕಬಾರದು. ನೀವು ಹೆಜ್ಜೆ ಮುಂದೆ ಹಾಕುತ್ತಾ ಇರಬೇಕು. ನೀವು ಹೀಗೆ ಮಾಡುವುದಾದರೆ, ನಾನು ಸತ್ಯವಾಗಿ ಹೇಳುತ್ತೇನೆ, ನೀವು ಅಲ್ಲಾಹನ ವಿಶಿಷ್ಟ ಜನಾಂಗವಾಗಿ ಪರಿಣಮಿಸುವಿರಿ. ನಾನು ಮನುಷ್ಯನಾಗಿರುವ ಹಾಗೆ ನೀವು ಸಹ ಮನುಷ್ಯರಾಗಿರುವಿರಿ. ನಿಮ್ಮ ದೇವನೇ ನನ್ನ ದೇವನಾಗಿರುವನು. ನೀವು ನಿಮ್ಮ ಪರಿಶುದ್ಧ ಶಕ್ತಿಗಳನ್ನು ನಿರರ್ಥಕ ಗೊಳಿಸಬೇಡಿರಿ. ನೀವು ಪೂರ್ಣವಾಗಿ ಅಲ್ಲಾಹನ ಕಡೆಗೆ ಬಾಗುವವರಾಗುವುದಾದರೆ ನಾನು ಅಲ್ಲಾಹನ ಇಚ್ಛೆ ಪ್ರಕಾರ ಹೇಳುತ್ತಿದ್ದೇನೆ, ನೀವು ಅಲ್ಲಾಹನಿಂದ ಆಯ್ಕೆಗೊಂಡ ವಿಶಿಷ್ಟ ಜನ ಸಮೂಹವಾಗುವಿರಿ. ನೀವು ಅಲ್ಲಾಹನ ಬೃಹತ್ತಾದ ಶಕ್ತಿಯ ನಂಬಿಕೆಯನ್ನು ನಿಮ್ಮ ಹೃದಯದಲ್ಲಿ ಸ್ಥಾಪಿಸಿರಿ. ಅವನ ಏಕತ್ವವನ್ನು ಕೇವಲ ನಾಲಗೆಯಿಂದ ಪ್ರಕಟಿಸುವವರಾಗಬೇಡಿರಿ. ನೀವು ನಿಮ್ಮ ಕೃತ್ಯಗಳ ಮೂಲಕ ಅದನ್ನು ಪ್ರಕಟಿಸಿರಿ. ಆಗ ಅಲ್ಲಾಹನು ಸಹ ತನ್ನ ಸಂಪ್ರೀತಿ ಮತ್ತು ಉಪಕಾರವನ್ನು ಕೃತ್ಯ ರೂಪದಲ್ಲಿ ಪ್ರಕಟಿಸುವನು."

ಆದುದರಿಂದ ನಮ್ಮವರಲ್ಲಿ ಪ್ರತಿಯೊಬ್ಬನು ತನ್ನ ಸ್ಥಿತಿಯಲ್ಲಿ ಬದಲಾವಣೆಯನ್ನು ಉಂಟುಮಾಡುವುದು ಆವಶ್ಯಕವಾಗಿದೆ. ಬಲಹೀನರಾದವರು ತಮ್ಮನ್ನು ಪರಿಶೋಧಿಸಬೇಕು. ತಮ್ಮನ್ನು ಉತ್ತಮರೆಂದು ಭಾವಿಸುವವರು ಸಹ ಒಳಿತುಗಳನ್ನು ಮಾಡುವುದರಲ್ಲಿ ವೃದ್ಧಿಗೊಳ್ಳಲು ಇನ್ನಷ್ಟು ಮಾರ್ಗಗಳನ್ನು ಹುಡುಕಬೇಕು. ಉತ್ತಮರು ಯಾರೆಂದೂ ನಾವು ನಮ್ಮ ಉದ್ದೇಶಲಕ್ಷ್ಯಗಳನ್ನು ಎಷ್ಟರ ಮಟ್ಟಿಗೆ ತಲಪಿದ್ದೇವೆ ಎಂದೂ ಅಲ್ಲಾಹನಿಗೆ ಮಾತ್ರ ತಿಳಿದಿರುತ್ತದೆ. ನಾವು ಒಂದು ಸ್ಥಳದಲ್ಲಿ ನಿಂತಿರಬೇಕು

ಎಂದು ಅಲ್ಲಾಹನು ಇಚ್ಛಿಸುವುದಿಲ್ಲ. ಈಗ ನಾನು ಉತ್ತಮನಾಗಿದ್ದೇನೆ ಒಳಿತುಗಳಲ್ಲಿ ಮುಂದುವರಿಯುತ್ತಿದ್ದೇನೆ ಮತ್ತು ಒಳಿತುಗಳನ್ನು ಗಳಿಸಿದ್ದೇನೆ ಎಂದು ಯಾರೂ ಯೋಚಿಸಬಾರದು. ಎಲ್ಲರೂ ತಮ್ಮ ಒಳಿತಿನ ಮಟ್ಟವನ್ನು ಮತ್ತಷ್ಟು ಉನ್ನತಗೊಳಿಸಲು ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: "ಅಲ್ಲಾಹನು ನನ್ನನ್ನು ಸಂಬೋಧಿಸಿ, ನಾನು ನನ್ನ ಜಮಾಅತಿನೊಂದಿಗೆ ಹೀಗೆ ತಿಳಿಸಬೇಕೆಂದು ಹೇಳಿರುವನು. ಸತ್ಯವಿಶ್ವಾಸಿಗಳಾದವರು ಹೇಗಿರಬೇಕೆಂದರೆ ಅವರ ವಿಶ್ವಾಸದಲ್ಲಿ ಲೌಕಿಕವಾದ ಮಿಶ್ರಣವಿರಬಾರದು. ಅದು ಕಪಟ ವಿಶ್ವಾಸ ಮತ್ತು ಹೇಡಿತನದ ಕೊಳೆಯಿಂದ ಮುಕ್ತವಾಗಿರಬೇಕು. ಅದು ಅನುಸರಣೆಯ ಮಟ್ಟದ ಯಾವುದೇ ಕೊರತೆಯನ್ನು ಹೊಂದಿರಬಾರದು. ಇಂತಹ ಜನರು ಅಲ್ಲಾಹನಿಗೆ ಪ್ರಿಯರಾದವರಾಗಿರುತ್ತಾರೆ. ಇಂತಹ ಜನರ ಹೆಜ್ಜೆಯೇ ಸತ್ಯದ ಹೆಜ್ಜೆಯಾಗಿರುತ್ತದೆ ಎಂದು ಅಲ್ಲಾಹನು ಹೇಳಿದ್ದಾನೆ."

ಆದುದರಿಂದ ಈ ಸತ್ಯದ ಹೆಜ್ಜೆಯಲ್ಲಿ ಹೆಜ್ಜೆ ಹಾಕುವ ಆವಶ್ಯಕತೆ ನಮಗಿದೆ. ಆಗ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ವಿಧಿಸಲಾದ ಜಯದ ದೃಶ್ಯಗಳನ್ನು ಕಾಣುವವರಾಗುವೆವು. ಈಗಿನ ಈ ಪರೀಕ್ಷೆಯ ಕಾಲಘಟ್ಟ ಖಂಡಿತವಾಗಿಯೂ ಕೊನೆಗೊಳ್ಳಲಿದೆ. ಆದರೆ ಇದು ವೇಗವಾಗಿ ಸಂಭವಿಸಲು ನಾವು ನಮ್ಮ ತಖ್ವದ ಮಟ್ಟವನ್ನು ವೃದ್ಧಿಗೊಳಿಸುತ್ತಾ ಮುಂದುವರಿಯುವ ಆವಶ್ಯಕತೆಯಿದೆ. ಅಲ್ಲಾಹನು ನಿಶ್ಚಯವಾಗಿಯೂ ಈ ಜಮಾಅತನ್ನು ಈ ಕಾಲಘಟ್ಟದಲ್ಲಿ ಸ್ಥಾಪಿಸಿರುವುದು ಇಸ್ಲಾಮ್ ಈ ಕಾಲಘಟ್ಟದಲ್ಲಿ ಉನ್ನತಿ ಪಡೆಯಲಿಕ್ಕೋಸ್ಕರವಾಗಿದೆ. ಇಸ್ಲಾಮ್ ಲೋಕದಲ್ಲಿ ಹರಡಲು ಮತ್ತು ಇತರ ಧರ್ಮಗಳ ಮೇಲೆ ಜಯಶಾಲಿಯಾಗಲಿಕ್ಕೋಸ್ಕರವಾಗಿದೆ.

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವಾಗ್ದಾನ ಮಾಡಿದ್ದಾನೆ– ಈ ಜಮಾಅತ್ ವರ್ಧಿಸುವುದು, ಇದು ವಿಶಾಲವಾಗಿ ಹಬ್ಬುವುದು ಎಂದು. ಯಾವುದೇ ಲೌಕಿಕ ಶಕ್ತಿ ಈ ಜಮಾಅತನ್ನು ನಾಶಮಾಡುವ ಸಾಮರ್ಥ್ಯ ಹೊಂದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನು ನಿಮ್ಮನ್ನು ನಾಶಮಾಡುವನು ಎಂದು ನೀವು ಯೋಚಿಸಬೇಡಿರಿ. ನೀವು ಅಲ್ಲಾಹನಿಂದ ಬಿತ್ತಲ್ಪಟ್ಟ ಒಂದು ಬೀಜವಾಗಿರುವಿರಿ. ಈ ಬೀಜ ಮೊಳಕೆಯೊಡೆಯುವುದು ಮತ್ತು ದೊಡ್ಡ ಮರವಾಗುವುದು. ಪ್ರತಿಯೊಂದು ಕಡೆಗಳಿಂದಲೂ ಅದರ ಕೊಂಬೆಗಳು ಹೊರಡುವುದು ಎಂದು ಅಲ್ಲಾಹನು ಹೇಳುತ್ತಾನೆ."

ನಾವು ಈ ಮರದ ಹರಡುವ ಕೊಂಬೆಗಳಾಗುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತ್ ಬಗ್ಗೆ ಹೊಂದಿದ ಪ್ರತೀಕ್ಷೆಗಳನ್ನು ನಾವು ಈಡೇರಿಸುವವರಾಗುವ ಭಾಗ್ಯ ಅಲ್ಲಾಹನು ನಮಗೆ ನೀಡಲಿ. ತಖ್ವದಲ್ಲಿ ಅಭಿವೃದ್ಧಿ ಹೊಂದುವವರಾಗೋಣ. ಸಹನೆ ಮತ್ತು ಪ್ರಾರ್ಥನೆ ಮೂಲಕ ಶತ್ರುಗಳ ಪ್ರತಿಯೊಂದು ಆಕ್ರಮಣವನ್ನು ನಿಷ್ಫಲಗೊಳಿಸುವವರಾಗೋಣ. ಅಲ್ಲಾಹನು ಹಾಗೆಯೇ ಮಾಡಲಿ – ಆಮೀನ್.

ನಮಾಝ್‌ಗಳ ನಂತರ ಹುಝೂರ್, ದೋಲ್‌ಮಿಯಾದ ಮುಕರ್ರಮ್ ಮಲಿಕ್ ಖಾಲಿದ್ ಜಾವೇದ್ ಸಾಹೇಬರ ನಮಾಝೆ ಜನಾಝೆ ಗಾಯಿಬ್ ನಿರ್ವಹಿಸಿದರು.

*****

***Friday Sermon delivered by Hadrath Khaleefatul Masih Al Khamis** (atba)*

*At, Masjid Baithul Futhuh, London on 23-12-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon